333
30/6/2015

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2015-16ನೇ ಸಾಲಿಗೆ ಬೆಂಗಳೂರಿನ ವಿಜಯನಗರ ಎಜುಕೇಷನಲ್ ಟ್ರಸ್ಟ್‌ನ ವತಿಯಿಂದ **"ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್"** ಎಂಬ ಖಾಸಗಿ ಪಾಲಿಟೆಕ್ನಿಕ್‌ನ್ನು ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡುವ ಬಗ್ಗೆ-

-----

ಓದಲಾಗಿದೆ:-

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 04 ಡಿವಿಪಿ (2) 2015, ದಿ:27-05-2015.

ಪ್ರಸ್ತಾವನೆ:-

ಮೇಲೆ ಓದಲಾದ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪ್ರಸ್ತಾವನೆಯಲ್ಲಿ ವಿಜಯನಗರ ಎಜುಕೇಷನಲ್ ಟ್ರಸ್ಟ್, ವಿಜಯನಗರ 2ನೇ ಹಂತ (ಹಂಪಿ ನಗರ) ಬೆಂಗಳೂರು ಇವರ ವತಿಯಿಂದ 2015-16ನೇ ಶೈಕ್ಷಣಿಕ ಸಾಲಿನಿಂದ "ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್" ಎಂಬ ಖಾಸಗಿ ಪಾಲಿಟೆಕ್ನಿಕ್‌ನ್ನು ನಂ.13, ಸೆಕ್ಟರ್ 'ಎ' ಯಲಹಂಕ ನ್ಯೂ ಟೌನ್, ಯಲಹಂಕ, ಬೆಂಗಳೂರು ಇಲ್ಲಿ ಪ್ರಾರಂಭಿಸಲು ಎಐಸಿಟಿಇ, ನವದೆಹಲಿ ಇವರು ಅನುಮತಿ ನೀಡಿರುವ ಹಿನ್ನೆಲೆಯಲ್ಲಿ ಸದರಿ ಪಾಲಿಟೆಕ್ನಿಕ್‌ನ್ನು 05 ಡಿಪ್ಲೋಮೊ ಕೋರ್ಸುಗಳೊಂದಿಗೆ (ತಲಾ 60 ವಿದ್ಯಾರ್ಥಿಗಳ ಪ್ರಮಾಣದೊಂದಿಗೆ) ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಈ ಮೇಲೆ ಹೇಳಿದ ಆಡಳಿತ ಮಂಡಳಿಯು ಕೋರಿದ್ದ ಹಿನ್ನೆಲೆಯಲ್ಲಿ, ಈ ಬಗ್ಗೆ ನಿರ್ದೇಶನಾಲಯದ ವತಿಯಿಂದ ಸ್ಥಳ ತನಿಖೆಗೆಗೊಳಪಡಿಸಲಾಗಿರುತ್ತದೆ. ಸದರಿ ಸ್ಥಳ ತನಿಖಾ ತಂಡವು 2015-16ನೇ ಸಾಲಿನಿಂದ ಬೆಂಗಳೂರಿನ ವಿಜಯನಗರ ಎಜುಕೇಷನಲ್ ಟ್ರಸ್ಟ್‌ನ ವತಿಯಿಂದ "ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್" ಎಂಬ ಖಾಸಗಿ ಪಾಲಿಟೆಕ್ನಿಕ್‌ನ್ನು ಪ್ರಾರಂಭಿಸಲು ಸದರಿ ಸಂಸ್ಥೆಯು ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರುವ ಹಿನ್ನೆಲೆಯಲ್ಲಿ, ಸದರಿ ಪಾಲಿಟೆಕ್ನಿಕ್‌ನ್ನು 2015-16ನೇ ಸಾಲಿನಿಂದ 05 ಡಿಪ್ಲೋಮೊ ಕೋರ್ಸುಗಳೊಂದಿಗೆ (ತಲಾ 60 ವಿದ್ಯಾರ್ಥಿಗಳ ಪ್ರಮಾಣದೊಂದಿಗೆ) ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡಬೇಕೆಂದು ತಾಂತ್ರಿಕ ಶಿಕ್ಷಣ ನಿರ್ದೇಶಕರು ಕೋರಿದ್ದರು.

ಈ ಹಿನ್ನೆಲೆಯಲ್ಲಿ, ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕ್ಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 150 ಟಿಪಿಇ 2015.**
**ಬೆಂಗಳೂರು, ದಿನಾಂಕ:25ನೇ ಜೂನ್ 2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿಜಯನಗರ ಎಜುಕೇಷನಲ್ ಟ್ರಸ್ಟ್, ವಿಜಯನಗರ 2ನೇ ಹಂತ (ಹಂಪಿ ನಗರ) ಬೆಂಗಳೂರು-560104 ಈ ಸಂಸ್ಥೆಯ ವತಿಯಿಂದ "ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್" ಎಂಬ ಖಾಸಗಿ ಪಾಲಿಟೆಕ್ನಿಕ್‌ನ್ನು 2015-16ನೇ ಶೈಕ್ಷಣಿಕ

ಸಾಲಿನಿಂದ ಈ ಕೆಳಕಂಡ ಹೆಸರು, ವಿಳಾಸ, ಕೋರ್ಸು ಮತ್ತು ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು ಸರ್ಕಾರವು ಅನುಮೋದನೆ ನೀಡಿ ಆದೇಶಿಸಿದೆ.

| ಪಾಲಿಟೆಕ್ನಿಕ್ನ ಹೆಸರು ಮತ್ತು ವಿಳಾಸ | ಕೋರ್ಸುಗಳ ವಿವರ | ಪ್ರವೇಶ ಸಂಖ್ಯೆ |
|---|---|---|
| **ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್,** ನಂ.13, ಸೆಕ್ಟರ್ 'ಎ' ಯಲಹಂಕ ನ್ಯೂ ಟೌನ್, ಯಲಹಂಕ, ಬೆಂಗಳೂರು-64. | 1. ಸಿವಿಲ್ ಇಂಜಿನಿಯರಿಂಗ್ | 60 |
| | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 |
| | 3. ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿ. | 60 |
| | 4. ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 60 |
| | 5. ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 60 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

25/11/15

(ಬಿ.ನಾಗಭೂಷಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಗೆ:

1. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು
2. ಅಧ್ಯಕ್ಷರು / ಕಾರ್ಯದರ್ಶಿಗಳು, ವಿಜಯನಗರ ಎಜುಕೇಷನಲ್ ಟ್ರಸ್ಟ್, ವಿಜಯನಗರ 2ನೇ ಹಂತ (ಹಂಪಿ ನಗರ) ಬೆಂಗಳೂರು (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
3. ಪ್ರಾಂಶುಪಾಲರು, ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ನಂ.13, ಸೆಕ್ಟರ್ 'ಎ' ಯಲಹಂಕ ನ್ಯೂ ಟೌನ್, ಯಲಹಂಕ, ಬೆಂಗಳೂರು-64. (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ ಅವರ ಆಪ್ತ ಕಾರ್ಯದರ್ಶಿಗಳು
4. ಸರ್ಕಾರದ ಉಪ ಕಾರ್ಯದರ್ಶಿ, ತಾಂತ್ರಿಕ ಮತ್ತು ಕಾಲೇಜು ಶಿಕ್ಷಣ ಇಲಾಖೆ
5. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು

ಹಿಂಬರಹ ಸಂಖ್ಯೆ: ಡಿಟಿಇ 05 ಡಿಪಿಪಿ(2) 2015 ದಿನಾಂಕ: 06/07/2015.

ಸರ್ಕಾರದ ಆದೇಶದ ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ಈ ಕೆಳಕಂಡ ಅಧಿಕಾರಿಗಳಿಗೆ ಹಾಗೂ ವಿಭಾಗಗಳಿಗೆ ಕಳುಹಿಸಲಾಗಿದೆ.

01. ಅಧ್ಯಕ್ಷರು / ಕಾರ್ಯದರ್ಶಿಗಳು, ವಿಜಯನಗರ ಎಜುಕೇಷನಲ್ ಟ್ರಸ್ಟ್, ವಿಜಯನಗರ 2ನೇ ಹಂತ, (ಹಂಪಿ ನಗರ) ಬೆಂಗಳೂರು.- 560104
02. ಪ್ರಿನ್ಸಿಪಾಲರು, ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ನಂ.13, ಸೆಕ್ಟರ್ 'ಎ' ಯಲಹಂಕ, ನ್ಯೂ ಟೌನ್, ಯಲಹಂಕ, ಬೆಂಗಳೂರು-64.
03. ಜಂಟಿ ನಿರ್ದೇಶಕರು [ಆಡಳಿತ/ಪರೀಕ್ಷೆ/ತನಿಖೆ/ಎಟಿಎಸ್]
04. ಉಪ ನಿರ್ದೇಶಕರು [ಯೋಜನೆ/ಪರೀಕ್ಷೆ/ತನಿಖೆ]
05. ಸಹಾಯಕ ನಿರ್ದೇಶಕರು [ಯೋಜನೆ/ಪರೀಕ್ಷೆ/ತನಿಖೆ/ಎಂಪಿಸಿ]
06. ಸಂಖ್ಯಾಧಿಕಾರಿಗಳಿಗೆ
07. ಆಡಳಿತಾಧಿಕಾರಿಗಳಿಗೆ
08. ರಿಜಿಸ್ಟ್ರಾರ್ (ಪರೀಕ್ಷೆ/ಎಸಿಎಂ)
09. ಅಧೀಕ್ಷಕರು, ಎಸಿಎಂ ವಿಭಾಗ
10. ಕಾರ್ಯನಿರ್ವಾಹಕರು, ಎಸಿಎಂ(2) ವಿಭಾಗ
11. ಸರ್ಕಾರಿ ಆದೇಶಗಳ ಕಡತಕ್ಕೆ
12. ಈ ಗೌರ್‌ನೆನ್ಸ್ ಸೆಲ್‌ಗೆ
13. ನಿರ್ದೇಶಕರ ಆಪ್ತ ಶಾಖೆಗೆ
14. Systems Analyst - DTE's Computer Section.

ಜಂಟಿ ನಿರ್ದೇಶಕರು (ಎಟಿಎಸ್)

6/7/2015